ಸಾಗರ ತಾಲ್ಲೂಕಿನ ಶೆಡ್ತಿಗೆರೆ ಗ್ರಾಮದ ಸಮುದ್ಯತಾ ವೆಂಕಟ್ರಾಮು ಅವರದು ಕೃಷಿ ಕುಟುಂಬ. ಸಾಹಿತ್ಯ ಕೃಷಿಯಲ್ಲೂ ಆಸಕ್ತರಾಗಿರುವ ಸಮುದ್ಯತಾ ಮೂಲತಃ ಕವಿ, ಗಮಕ ಕಲೆಯಲ್ಲೂ ಪರಿಣತಿ ಪಡೆದವರು. 'ಭಾನುಮತಿಯ ಮುತ್ತುಗಳು' ಮತ್ತು 'ಯೋಜನಗಂಧಿಯ ಸ್ವಗತ' ಅವರ ಪ್ರಕಟಿತ ಕವನ ಸಂಕಲನಗಳು.

ತಯಾರಾಗುತ್ತಿದ್ದವು. ಬಹಳ ರಗಳೆ ಮಾಡಿದರೆ ನಮ್ಮ ಚಿಕ್ಕಪ್ಪನ ದಯೆಯಿಂದ ಕೆಲವೊಮ್ಮೆ ನನಗೂ ಹೊಸ ತಡಿಯ ಭಾಗ್ಯ ದೊರೆಯುತ್ತಿತ್ತು. ಹೂವಿನದ್ದೋ, ಗೀಟು ಗೀಟಿನದ್ದೋ ಚಿತ್ತಾರದ ತಡಿಗೆ ಸಂಭ್ರಮ ಪಟ್ಟರೆ 'ಕೂಸೇ ಇದು ಅದೇ ತಡಿ ಮಂಜಪ್ಪಣ್ಣನದ್ದೇ' ಎಂದು ಕಾಲೆಳೆಯುವವರೂ ಇದ್ದರು.

ಅಂದು ಎಂದಿಗಿಂತ ಮುಂಚೆ ಹಳೆಯ ಹೊದಿಕೆ ಹೊದ್ದು ಹೊಸ ಹಾಸಿಗೆಯಲ್ಲಿ ಶಯನ. ಚಂದಾಮಾಮ ಕಥೆಯಲ್ಲಿ ಬರುವ ಮಾಯಾಚಾಪೆಯಂತೆಯೇ ನನ್ನ ಹಾಸಿಗೆಯೂ ಅದರ ಮೇಲೆ ಮಲಗಿದ ನನ್ನನ್ನು ದೂರದೊಂದು ಸುಂದರ ಊರಿಗೆ ಕರೆದೊಯ್ಯುತ್ತಿತ್ತು.

ಸಾಮಾನ್ಯವಾಗಿ ದಿನಕ್ಕೊಂದು ಹಾಸಿಗೆಯಲ್ಲಿ ಮಲಗುವ ಪರಿಪಾಠ ಇರುವುದಿಲ್ಲ. ಹಾಗಾಗಿ ನಮಗೆ ಅದರೊಂದಿಗೆ ಒಂದು ರೀತಿಯ ಆಪ್ತತೆ ಬೆಳೆದಿರುತ್ತದೆ. ನಮ್ಮ ಹಾಸಿಗೆಯಲ್ಲಿ ಯಾರೂ ಮಲಗುವಂತಿಲ್ಲ. ಅದು ಬರಿಯ ತಡಿ ಎಂದರೆ ತಡಿಯಲ್ಲ! ರಾತ್ರಿ ಬೆಳಗಿನವರೆಗೂ ನಮ್ಮನ್ನು ಬೇರೆ ಲೋಕಕ್ಕೇ ಕರೆದೊಯ್ದಿರುವುದಲ್ಲ. ನಮ್ಮ ಅಮ್ಮಮ್ಮನ ಹಾಸಿಗೆ ಎಂದರೆ ನನಗೆ ವಿಶೇಷ ಅನುಭವ. ಎಂತಹ ಚಳಿಯಲ್ಲೂ ಅದು ಬೆಚ್ಚಗಿರುತ್ತಿತ್ತು. ಸೊಲ್ಲಾಪುರಿ ಬೆಡ್‌ಶೀಟ್ ಜೊತೆ ಒಂದು ದುಪ್ಪಟಿ ಅಥವಾ ಜಡ್ಡಿ ಎರಡು ಕಂಬಳಿ ಇಷ್ಟೆಲ್ಲಾ ಇದ್ದು ರಾತ್ರಿ ಎಂಟು ಗಂಟೆಗೇ ಮಲಗಿದ ಅಮ್ಮಮ್ಮನ ಹಾಸಿಗೆ ಬೆಚ್ಚಗಿರದೇ ಮತ್ತೇನು...

ಅಷ್ಟೇ ಅಲ್ಲ ಚೌಕಿಮತ್ತಿನಲ್ಲಿ ಬಿಚ್ಚಿಕೊಂಡ ಅಮ್ಮಮ್ಮನ ಹಾಸಿಗೆಯಲ್ಲಿ ಅವಳೊಂದಿಗೆ ಬೆಚ್ಚಗೆ ಹೊದ್ದು ಮಲಗಿದಾಗ ಅದೆಷ್ಟು ಕಥೆಗಳು ರೆಕ್ಕೆ ಪುಕ್ಕಗಳನ್ನು ಕಟ್ಟಿಕೊಂಡು ಹೊರಬರುತ್ತಿದ್ದವು. ಅವಳು ನಮ್ಮ ತಂದೆಯ ಸೋದರತ್ತೆ. ಆದರೆ ನಮಗೆ ಆಕೆ ಸ್ವಂತ ಅಜ್ಜಿಯ ತರಹವೇ ಆಗಿದ್ದಳು. ಯಾವ ವ್ಯತ್ಯಾಸವೂ ಇರಲಿಲ್ಲ. ಅವಳ ಹಾಸಿಗೆಯಲ್ಲಿ ಮಲಗಿ ನಿನ್ನ ಕಥೆಯನ್ನೇ ಹೇಳು ಎಂದಾಗ 'ಎಂತಾ ಕಥೆಯೇ ತಂಗೀ' ಎಂದು ಹೇಳಿದರೂ ಒಮ್ಮೊಮ್ಮೆ ಹೇಳಿಕೊಳ್ಳುತ್ತಿದ್ದಳು. ಎಪ್ಪತ್ತೈದು ದಾಟಿದ ಅಮ್ಮಮ್ಮನ ಮೈಯ ಸುಕ್ಕುಗಳು ಅವಳ ಹಾಸಿಗೆಯಂತೇ ಬೆಚ್ಚನೆಯ ಸ್ಪರ್ಶದ ಅನುಭವ ನೀಡಿದರೂ ಅವಳದ್ದೇ ಅನುಭವದ ಕಥೆ ಎಲ್ಲವನ್ನೂ ಅರೆ ಕ್ಷಣ ತಣ್ಣಗಾಗಿಸುತ್ತಿತ್ತು. ಬಾಲ್ಯದ ಕಥಾಪ್ರಪಂಚ ಅಮ್ಮಮ್ಮನ ಹಾಸಿಗೆಯಿಂದಲೇ ತೆರೆದುಕೊಂಡಿತೇನೋ?!

ಚಿಕ್ಕ ವಯಸ್ಸಿನಲ್ಲೇ ಮಕ್ಕಳು ಗಂಡ ಎಲ್ಲರನ್ನು ಕಳೆದುಕೊಂಡು ತವರು ಸೇರಿದ ಅಮ್ಮಮ್ಮನದ್ದು ಎಂದು ಗುರುತಿಸಲು ಅವಳದ್ದೊಂದು ಕೈ ಚೀಲ ಮತ್ತು ಹಾಸಿಗೆ. ಹಾಸಿಗೆಯ ಮೇಲೆ ಕುಳಿತು ಭಜಗೋವಿಂದಂ, ಜಯದೇವ ಜಯದೇವ ಎಂದೆಲ್ಲ ಹಾಡಿ ಕೊಳ್ಳುತ್ತಾ ಹಾಗೆಯೇ ಈ ಲೋಕದೊಂದಿಗೆ ಸಂಬಂಧವೇ ಇಲ್ಲವೆಂಬಂತೆ ಮೌನವಾಗಿ ಮಲಗಿಬಿಡುತ್ತಿದ್ದಳು.

ಆಗೆಲ್ಲಾ ಈಗಿನಂತೆ ಕುರ್ಲಾನ್ ಮತ್ತೆ ಅದೇನೇನೋ ಬೇರೆ ಬೇರೆ ತರಹದ ತಡಿಗಳಿರಲಿಲ್ಲ. ಹೆಚ್ಚೋ ಕಡಿಮೆಯೋ ಒಟ್ಟಿನಲ್ಲಿ ಹತ್ತಿಯದೇ ಹಾಸಿಗೆಗಳನ್ನು ನಾವು ಕಂಡವರು. ಈಗಲಾದರೋ ಅಯಸ್ಕಾಂತೀಯ ಗುಣ ಇರುವ ತಡಿಗಳಂತೆ, ಮಲಗಿದರೆ ಖಾಯಿಲೆಗಳೆಲ್ಲಾ ಮಾಯವಂತೆ, ತರತರದ ಜಾಹೀರಾತುಗಳನ್ನು ಕಾಣಬಹುದು. ಅಪ್ಪನ ಜೇಬಿನ ದುಡ್ಡುಗಳೆಲ್ಲ ಚಟಪಟ ಗುಟ್ಟುತ ಸಿಡಿಯುವವು ಎಂಬ ಕಾಲವಿದು. ಇದಕ್ಕೆ ಐಶಾರಾಮಿ ತಡಿಗಳೂ ಸೇರಿಕೊಂಡು ಸ್ವಲ್ಪ ದುಬಾರಿಯಾದ ನಿದ್ದೆ ಎನ್ನಬಹುದೇನೋ!

ನಮ್ಮಲ್ಲಿ ಮಲಗಲು ಚಾಪೆಗಳನ್ನು ಬಳಸುತ್ತಿರಲಿಲ್ಲ. ತಿಂಗಳ ಆ ಮೂರು ದಿನಗಳು ಮಾತ್ರ ಹೆಂಗಸರಿಗೆ ಲೇಪಿಲ್ಲದ ಶಯನೋತ್ಸವ. ಕಂಬಳಿಯೋ ಗೋಣಿಚೀಲವೋ ಅದರ ಮೇಲೊಂದಿಷ್ಟು ಹಳೆಯ ಸೀರೆಗಳನ್ನು ಹಾಸಿ ಮಲಗುವದಿತ್ತು. ಅಯ್ಯಬ್ಬಾ ಅದೊಂದು ದೊಡ್ಡ ಕಷ್ಟ. ಒಳ್ಳೆಯ ಹಾಸಿಗೆಯಾದರೂ ಇದ್ದಿದ್ದರೆ ಮೂರು ಹೊತ್ತು